# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 163 (305)
2. ಸದಸ್ಯರ ಹೆಸರು : ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 09.12.2025
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರಿಗೆ 2ನೇ ವಿಮಾನ ನಿಲ್ದಾಣ ಸಂಬಂಧ ಸ್ಥಳಗಳ ಆಯ್ಕೆ/ಗುರುತಿಸುವಿಕೆ ಕಾರ್ಯ ನಡೆದಿದೆಯೇ; (ವಿವರ ನೀಡುವುದು) | ಬೆಂಗಳೂರಿನಲ್ಲಿ 2ನೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿ 3 ಸ್ಥಳಗಳನ್ನು ಗುರುತಿಸಲಾಗಿದೆ. ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ(AAI) ಸಂಸ್ಥೆಯ ತಾಂತ್ರಿಕ ತಂಡವು ದಿನಾಂಕ:07.04.2025 ರಿಂದ 09.04.2025 ವರೆಗೆ ಈ ಮೂರು ಸ್ಥಳಗಳ ಪರಿವೀಕ್ಷಣೆಯನ್ನು ಕೈಗೊಂಡಿರುತ್ತದೆ. ಕೇಂದ್ರ ಸರ್ಕಾರದ ನಾಗರೀಕ ವಿಮಾನಯಾನ ಸಚಿವಾಲಯದಿಂದ ಪೂರ್ವ ಕಾರ್ಯ ಸಾಧ್ಯತಾ ವರದಿಯು ದಿನಾಂಕ:28.10.2025ರಂದು ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (KSIIDC)ದಲ್ಲಿ ಸ್ವೀಕೃತವಾಗಿರುತ್ತದೆ.<br><br>ಪ್ರಸ್ತುತ ಕಾರ್ಯ ಸಾಧ್ಯತಾ ವರದಿಯನ್ನು ತಯಾರಿಸುವ ಸಂಬಂಧ ಸಮಾಲೋಚಕರನ್ನು (Transaction Advisor) ಆಯ್ಕೆ ಮಾಡಲು ಟೆಂಡರ್ ಆಹ್ವಾನಿಸಲು ಕ್ರಮವಹಿಸಿದೆ. |
| (ಆ) | ಹಾಗಿದ್ದಲ್ಲಿ, ಯಾವ ಯಾವ ಸ್ಥಳಗಳನ್ನು ಆಯ್ಕೆ ಮಾಡಲಾಗಿದೆ; ಈ ಸ್ಥಳಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಯಾವ ಯಾವ ಅಂಶಗಳನ್ನು ಆಧರಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು) | ವಿಮಾನ ನಿಲ್ದಾಣ ಅಭಿವೃದ್ಧಿಗೆ ಸೂಕ್ತವಾದ ಸ್ಥಳಗಳ ಆಯ್ಕೆ ಮಾಡಲು ಕಾರ್ಯತಂತ್ರದ ಹೊಂದಾಣಿಕೆ, ಬಳಕೆದಾರರಿಗೆ ಅನುಕೂಲತೆ, ಸ್ಥಳ ವೈಶಿಷ್ಟ್ಯಗಳು, ಸಂಪರ್ಕ ಇತ್ಯಾದಿ ಅಂಶಗಳ ಅನುಸಾರ ಮೂರು ಸ್ಥಳಗಳನ್ನು ಗುರುತಿಸಿದೆ. |
| (ಇ) | ಸ್ಥಳಗಳ ಅನುಮೋದನೆ ಕೋರಿ ಕೇಂದ್ರ ಸರ್ಕಾರಕ್ಕೆ (Airport Authority of India) ಶಿಫಾರಸ್ಸು ಮಾಡಲಾಗಿದೆಯೇ; | ಭಾರತ ಸರ್ಕಾರದ ನಾಗರಿಕ ವಿಮಾನಯಾನ ಸಚಿವಾಲಯ (MoCA)ಯ Steering Committee ಯಿಂದ Site clearance ಅನ್ನು ಪಡೆಯಲು ಅರ್ಜಿಗಳನ್ನು ದಿನಾಂಕ:05.03.2025ರಂದು ಸಲ್ಲಿಸಲಾಗಿರುತ್ತದೆ. |
| (ಈ) | ಇದ್ದಲ್ಲಿ, ಶಿಫಾರಸ್ಸು ಮಾಡಲಾದ ಪ್ರಸ್ತಾವನೆಯಲ್ಲಿ ಹೆಸರಿಸಲಾಗಿರುವ ಸ್ಥಳಗಳು ಯಾವುವು? (ಸಂಪೂರ್ಣ ಮಾಹಿತಿ ನೀಡುವುದು) | ಬೆಂಗಳೂರು ನಗರಕ್ಕೆ 2ನೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಲು ಆಯ್ಕೆ ಮಾಡಿರುವ ಸ್ಥಳಗಳ ವಿವರಗಳು ಈ ಕೆಳಗಿನಂತಿವೆ.<br>1. ಸೋಮನಹಳ್ಳಿ ಗ್ರಾಮ, ಕನಕಪುರ ರಸ್ತೆ, ರಾಮನಗರ<br>2. ಚೂಡಹಳ್ಳಿ ಗ್ರಾಮ, ಕನಕಪುರ ರಸ್ತೆ, ರಾಮನಗರ<br>3. ಗುಡೆಮಾರನಹಳ್ಳಿ ಗ್ರಾಮ, ನೆಲಮಂಗಲ ಹತ್ತಿರ. |

ಸಂಖ್ಯೆ:ಮೂಅಇ 244 ರಾಅವಿ 2025

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ, ಸಚಿವರು